ಸುವರ್ಣ ಕರ್ನಾಟಕ

ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯ ಸಹ ನಿರ್ದೇಶಕರವರ ಕಛೇರಿ,( ಮ.ಉ.ಯೋ)
ಕೆ.ಜಿ.ರಸ್ತೆ, ಬೆಂಗಳೂರು-02

ಸಂಖ್ಯೆ: ಎಂ2.ಅದಾ.ಸುರಕ್ಷತೆ 12/2007-08. ದಿನಾಂಕ: 01-08-2007.

ಸುತ್ತೋಲೆ

ವಿಷಯ: ಅಕ್ಷರ ದಾಸೋಹ ಮತ್ತು ಇತರೆ ಕಾರ್ಯಕ್ರಮಗಳಡಿಯಲ್ಲಿ ಅಡಿಗೆ ತಯಾರಿಸುವ ಸ್ಥಳಗಳಲ್ಲಿ ಸುರಕ್ಷಾ ಕ್ರಮ ಕೈಗೊಳ್ಳುವ ಬಗ್ಗೆ.

ಉಲ್ಲೇಖ: 1. ಇಡಿ 84 ಎಂಎಂಎಸ್ 04 ದಿನಾಂಕ: 20-07-2004 ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರದ ಸಚಿವಾಲಯ ವಿಧಾನ ಸೌಧ ಬೆಂಗಳೂರು.

2. ಈ ಕಛೇರಿ ಸುತ್ತೋಲೆ ಸಂಖ್ಯೆ ಎಂ2 ಅದಾ ಸುತ್ತೋಲೆ 42/2004-05. ದಿನಾಂಕ:29-07-2004.
3. ಅದಾ.ಕಾರ್ಯಕ್ರಮದಡಿ ಅಡುಗೆ ಸಿಬ್ಬಂದಿ ತರಬೇತಿ ಕಾರ್ಯಕ್ರಮದಲ್ಲಿ ಅಡಿಗೆ ಮನೆ ಸುರಕ್ಷತೆಯ ಬಗ್ಗೆ ಹೊರಡಿಸಿರುವ ಮಾರ್ಗಸೂಚಿ.
4. ಈ ಕಛೇರಿ ಸುತ್ತೋಲೆ ಸಂಖ್ಯೆ: ಎಡಿ ಎಂ2 ಮಕ್ಕಳ ಸುರಕ್ಷತೆ 20/2007-08. ದಿನಾಂಕ: 18-07-2007.

***

ಅಕ್ಷರ ದಾಸೋಹ ಕಾರ್ಯಕ್ರಮದಡಿ ಮಕ್ಕಳ ಸುರಕ್ಷತೆ ಹಾಗೂ ಯೋಜನೆಯ ಯಶಸ್ವಿ ಅನುಷ್ಠಾನ ಹಾಗೂ ಸಮರ್ಪಕ ನಿರ್ವಹಣೆ ಕುರಿತು ಉಲ್ಲೇಖದ ಸುತ್ತೋಲೆಗಳಲ್ಲಿ ಈಗಾಗಲೇ ತಿಳಿಸಲಾಗಿದೆ. ಉಲ್ಲೇಖದ ಸುತ್ತೋಲೆಗಳನ್ನು ಮುಂದುವರೆಸುತ್ತಾ ಇತ್ತೀಚಿನ ಕೆಲವು ಶಾಲೆಗಳಲ್ಲಿ ಶಾಲೆಗಳ ಪರಿಸರದಿಂದಾಗಿ ಮಕ್ಕಳ ಸುರಕ್ಷತೆಯ ಬಗ್ಗೆ ಆತಂಕ ಮೂಡಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ.

ಅಕ್ಷರ ದಾಸೋಹ ಕಾರ್ಯಕ್ರಮದಡಿ ಅಡಿಗೆ ಮನೆ ಮತ್ತು ಅಡಿಗೆ ಮಾಡುವಾಗ ಹಲವು ಮುಂಜಾಗ್ರತೆ ಕ್ರಮಗಳನ್ನು ಅನುಸರಿಸುವುದು ಕಡ್ಡಾಯವಾಗಿದೆ. ಉಲ್ಲೇಖ 3 ರಲ್ಲಿ ಅಡಿಗೆಯವರ ತರಬೇತಿ ಮಾರ್ಗ ಸೂಚಿ ಹೊರಡಿಸಲಾಗಿದ್ದು ಇದರಲ್ಲಿ ಸ್ವಚ್ಛತೆ, ಮುನ್ನೆಚ್ಚರಿಕೆ, ಶುಚಿತ್ವದ ಬಗ್ಗೆ ಕೈಗೊಳ್ಳಬೇಕಾದ ಕ್ರಮಗಳನ್ನು ವಿವರವಾಗಿ ತಿಳಿಸಲಾಗಿದೆ. ಇದರನ್ವಯ ಈ ಕೆಳಕಂಡ ಹೆಚ್ಚುವರಿ ಸೂಚನೆಗಳನ್ನೂ ಪಾಲಿಸಲು ಕೋರಲಾಗಿದೆ.

1. ಶಾಲೆಗಳಲ್ಲಿನ ಅಡಿಗೆ ಕೋಣೆಗಳು (ಅಂದರೆ ಅಡಿಗೆ ತಯಾರಿಸುವ ಎಲ್ಲಾ ಸ್ಥಳಗಳು) ತರಗತಿಗಳಿಂದ ತುಸು ದೂರದಲ್ಲಿರುವಂತೆ ಎಚ್ಚರ ವಹಿಸುವುದು

2. ಶಾಲೆಗಳಲ್ಲಿನ / ವಿದ್ಯಾರ್ಥಿಗಳನ್ನು / ಅಂಗನವಾಡಿ ಕೇಂದ್ರಗಳಲ್ಲಿನ ವಿದ್ಯುತ್ ಉಪಕರಣಗಳನ್ನು / ಸಂಪರ್ಕಗಳನ್ನು ಕೂಲಂಕುಷವಾಗಿ ಪರಿಶೀಲಿಸಿ ಅಪಾಯವಿಲ್ಲದಿರುವ ಬಗ್ಗೆ ಖಾತರಿ ಪಡಿಸಿಕೊಳ್ಳುವುದು.
3. ಹುಲ್ಲಿನ ಮೇಲ್ಚಾವಣಿಗಳುಳ್ಳ ಕೋಣೆಗಳಲ್ಲಿ ಅಡಿಗೆ ತಯಾರಿಸುವುದನ್ನು ಕಡ್ಡಾಯವಾಗಿ ನಿಷೇದಿಸುವುದು.
4. ತಾತ್ಕಾಲಿಕ ಅಡಿಗೆ ಕೋಣೆಗಳನ್ನು ನಿರ್ಮಾಣ ಮಾಡುವಾಗ ಅವುಗಳು ತರಗತಿಗಳಿಂದ ತುಸು ದೂರದಲ್ಲಿರುವಂತೆ ಎಚ್ಚರವಹಿಸುವುದು.
5. ಅಡಿಗೆ ಕೋಣೆಗಳ ಬಳಿ ಮಕ್ಕಳು ಸುಳಿದಾಡದಂತೆ ನಿಯಂತ್ರಿಸಲು ಅಡಿಗೆ ಮಾಡುವವರು ಮತ್ತು ಶಾಲೆಯ ಮುಖ್ಯಸ್ಥರು ಎಚ್ಚರವಹಿಸುವುದು.
6. ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುವ ವಿವಿಧ ಇಲಾಖೆಗಳ ಅಧಿಕಾರಿಗಳು ತಮ್ಮ ಪ್ರವಾಸದ ಅವಧಿಯಲ್ಲಿ ಶಾಲೆಗಳ ಅಡಿಗೆ ಕೋಣೆಗಳಿಗೆ ನಿರಂತರವಾಗಿ ಬೇಟಿ ನೀಡಿ ಅಲ್ಲಿಯ ಸುರಕ್ಷತೆಯ / ಸ್ವಚ್ಚತೆಯ ಬಗ್ಗೆ ಪುನರಾವಲೋಕನೆ ಮಾಡುವುದು.
7. ನಿರ್ಮಾಣದ ವಿವಿಧ ಹಂತದಲ್ಲಿರುವ ಅಡಿಗೆ ಕೋಣೆಗಳನ್ನು ಕೂಡಲೇ ಪೂರ್ಣಗೊಳಿಸುವುದು.
8. ಅಡಿಗೆ ಅನಿಲಕ್ಕೆ ಅಳವಡಿಸಿರುವ ರೆಗ್ಯೂಲೇಟರ್, ಬರ್ನರ್, ಪೈಪುಗಳನ್ನು ಪೂರ್ಣ ಪರಿಶೀಲಿಸಿ ಬದಲಾವಣೆ ಅವಶ್ಯವೆನಿಸಿದಲ್ಲಿ ಕ್ರಮ ಕೈಗೊಂಡು ಸುರಕ್ಷತೆಯನ್ನು ಕಾಪಾಡಲು ತಿಳಿಸಿದೆ.
9. ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಜಿಲ್ಲೆಯಲ್ಲಿ ಅಡಿಗೆ ಕೋಣೆಗಳ ನಿರ್ಮಾಣದ ಜವಾಬ್ದಾರಿಯನ್ನು ಹೊತ್ತಿರುವ ಎಲ್ಲಾ ಅಧಿಕಾರಿಗಳ ಸಭೆಗಳನ್ನು ನಡೆಸಿ ಈಗ ಇರುವ ಮತ್ತು ನಿರ್ಮಾಣದ ಹಂತದಲ್ಲಿರುವ ಅಡಿಗೆ ಕೋಣೆಗಳ ಒಟ್ಟಾರೆ ಸುರಕ್ಷತೆಯ ಬಗ್ಗೆ ಪುನರಾವಲೋಕನೆ ಮಾಡುವುದು.

ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ
1/8/2007

ಪ್ರತಿಯನ್ನು:
1. ಹೆಚ್ಚುವರಿ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ ಧಾರವಾಡ / ಗುಲ್ಬರ್ಗ ಜಿಲ್ಲೆ.
2. ರಾಜ್ಯದ ಎಲ್ಲಾ ಜಿಲ್ಲಾ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಜಿಲ್ಲಾ ಪಂಚಾಯತ್ ಸೂಕ್ತ ಕ್ರಮಕ್ಕಾಗಿ.
3. ರಾಜ್ಯದ ಎಲ್ಲಾ ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ
4. ರಾಜ್ಯದ ಎಲ್ಲಾ ಶಿಕ್ಷಣಾಧಿಕಾರಿಗಳು, ಅಕ್ಷರ ದಾಸೋಹ ಕಾರ್ಯಕ್ರಮ ಜಿಲ್ಲಾ ಪಂಚಾಯತ್